4321 (4959) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ನೌಕರರಿಗೆ ಕಳೆದ 12 ತಿಂಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾರವಾರ ಘಟಕದಲ್ಲಿ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ;

ಇ) ನಿಗಮದ ನೌಕರರಿಗೆ ಸ್ವ-ಇಚ್ಛಾ ನಿಗಮದ ನಿವೃತ್ತಿ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಈ) ನೌಕರರ ವೇತನ ಪಾವತಿಗೆ ಸರ್ಕಾರ ಯಾವ ಕ್ರಮಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಾರವಾರ ಘಟಕದಲ್ಲಿ ಒಟ್ಟು 24 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ನಿಗಮದ ನೌಕರರಿಗೆ ಸ್ವ-ಇಚ್ಛಾ ನಿವೃತ್ತಿ ನೀಡುವ ಬಗ್ಗೆ ಸರ್ಕಾರ ನಿಗಮದಿಂದ ಪ್ರಸ್ತಾವನೆ ಪಡೆದು ಪರಿಶೀಲಿಸುತ್ತಿದೆ.

ಈ) ನಿಗಮವನ್ನು ಪುನಃಶ್ಚೇತನಗೊಳಿಸುವ ಅಥವಾ ಮುಚ್ಚುವ ಕುರಿತು ಅಂತಿಮ ತೀರ್ಮಾನವನ್ನು ಸಚಿವ ಸಂಪುಟವು ಕೈಗೊಂಡ ನಂತರ ವೇತನ ಪಾವತಿಗೆ ಕ್ರಮ ವಹಿಸಲಾಗುವುದು.

4322 (4960) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಬರ್ಡ್ ಯೋಜನೆಯಿಂದ ನಿರಾಶ್ರಿತ ಸೀಬರ್ಡ್‌ರಾದ ಮೀನುಗಾರರ ಸಂಖ್ಯೆ ಎಷ್ಟು;

ಆ) ನಿರಾಶ್ರಿತ ಮೀನುಗಾರರಿಗೆ ಸರ್ಕಾರ ನಿರಾಶ್ರಿತ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ;

ಇ) ನಿರಾಶ್ರಿತ ಮೀನುಗಾರರು ನಿರಾಶ್ರಿತ ನಿಜವಾಗಿಯೂ ಅನಾಥರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದರೆ, ಈ ಮೀನುಗಾರರ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಸೀಬರ್ಡ್ ಯೋಜನೆಯಿಂದ ನಿರಾಶ್ರಿತರಾದ ಮೀನುಗಾರರ ಸಂಖ್ಯೆ 898.

ಆ) ನಿರಾಶ್ರಿತ ಮೀನುಗಾರರಿಗೆ ಸರ್ಕಾರದಿಂದ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಸೀಬರ್ಡ್ ನಿರಾಶ್ರಿತ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ 366
ಮನೆಗಳನ್ನು ಮಂಜೂರು ಮಾಡಲಾಗಿದೆ.

2) ಮೀನುಗಾರರ ಪುನರ್ವಸತಿ ಕುರಿತು ಈ ಕೆಳಗಿನ ಗ್ರಾಮಗಳಲ್ಲಿ ಜಮೀನು ಭೂ ಸ್ವಾಧೀನ ಪಡಿಸಿಕೊಂಡು ಪುನರ್ವಸತಿ ಕೇಂದ್ರ ನಿರ್ಮಿಸಲಾಗಿದೆ.

	ಕ್ಷೇತ್ರ	ಖರ್ಚಾದ ಹಣ (ಲಕ್ಷಗಳಲ್ಲಿ)
ಎ) ಅಮದಳ್ಳಿ	35–00–00	483.9320
ಬಿ) ಚಿತ್ತಾಕುಲ	37–06–00	416.6221
ಸಿ) ಹಾರವಾಡ	30–00–00	387.6679

3) ನಿರಾಶ್ರಿತ ಮೀನುಗಾರರಿಗೆ ಪುನರ್ವಸತಿ ಅನುದಾನ ತಲಾ ರೂ. 50,000–00 ಹಾಗೂ ಒಂದು ಮನೆ ನಿವೇಶನ ಮತ್ತು ಇಬ್ಬರು ವಯಸ್ಕ ಮಕ್ಕಳಿಗೆ ತಲಾ ರೂ.70.000–00 ಅನುದಾನ ನೀಡಲಾಗಿದೆ.

4) ಮನೆ ನಿರ್ಮಿಸಿರುವ ಪುನರ್ವಸತಿ ಕೇಂದ್ರಗಳಲ್ಲಿ ಯಾವತ್ತೂ ಮೂಲಭೂತ ಸೌಕರ್ಯಗಳಾದ ನೀರು, ಬೀದಿದೀಪ ಹಾಗೂ ರಸ್ತೆ ಸೌಕರ್ಯಗಳನ್ನು ಒದಗಿಸಲಾಗಿದೆ. ಹಾಗೂ ಶಾಲೆ, ಪೊಲೀಸ್ ಠಾಣೆ, ಬಸ್ ನಿಲ್ದಾಣ ಮತ್ತು ಆಸ್ಪತ್ರೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ.

5) ನಿರಾಶ್ರಿತ ಮೀನುಗಾರರ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕೊಠಡಿ ನಿರ್ಮಾಣದ ಬಗ್ಗೆ ರೂ.2,50,000–00 ಸಹಾಯಧನವನ್ನು ನೀಡಲಾಗಿದೆ.

6) ಅಮದಳ್ಳಿ ಮೀನುಗಾರಿಕಾ ಬಂದರು ನಿರ್ಮಾಣ ಕುರಿತು ರೂ.11.03 ಕೋಟಿ ವೆಚ್ಚದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಇ) ನಿರಾಶ್ರಿತ ಮೀನುಗಾರರಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು ಅನಾಥರಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 1) ಮೀನುಗಾರರ ನಿರಾಶ್ರಿತ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕೊಠಡಿ ನಿರ್ಮಾಣದ ಬಗ್ಗೆ ರೂ.2,50,000–00 ಸಹಾಯಧನವನ್ನು ಸಾಮಾಜಿಕ ಅಭಿವೃದ್ಧಿ ಸಂಘ, ಕಾರವಾರ, ಉತ್ತರ ಕನ್ನಡರವರಿಗೆ ಸಿಂಡಿಕೇಟ್ ಬ್ಯಾಂಕ್ ಚೆಕ್ ನಂ.920830 ದಿನಾಂಕ : 07–05–2004 ರಂತೆ ಬಿಡುಗಡೆ ಮಾಡಲಾಗಿದೆ.

2) ಅಮದಹಳ್ಳಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣಕ್ಕಾಗಿ ರೂ.11.03 ಕೋಟಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

4323 (4949) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದ ಮಂಗಳೂರಿನಿಂದ ಉಡುಪಿ ಜಿಲ್ಲೆಯ ಶಿರೂರವರೆಗೆ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಕಳೆದ ಮೂರು ವರ್ಷಗಳಿಂದ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು;

ಆ) ಈ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು (ವಿವರ ನೀಡುವುದು);

ಇ) ಈ ಅಪಘಾತಗಳನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಅಪಘಾತಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಮಾರಣಾಂತಿಕ ಅಪಘಾತಗಳ ಸಂಖ್ಯೆ	–	133
ಮಾರಣಾಂತಿಕವಲ್ಲದ ಅಪಘಾತಗಳ ಸಂಖ್ಯೆ	–	633